ಕಾವ್ಯಸಂಕ



ಆರಿಫ್ ರಾಜಾ

ಕವಯಿತ್ರಿ, ಯುವ ಲೇಖಕಿ
**ಇನಾಮ್**
ದೇಶ: **ಪ್ಯಾಲೆಸ್ಟೀನ್**

# ಕಾವ್ಯವೆಂಬುದು ಮನದ ಒಳತುಡಿತ

ಪ್ಯಾಲೆಸ್ಟೀನ್ ಯುವ ಕವಯಿತ್ರಿ ಹಾಗೂ ಕಥೆಗಾರ್ತಿ ಇನಾಮ್ ಜೂನ್ 16, 1982ರಂದು ಗಾಜಾದಲ್ಲಿ ಜನಿಸಿದರು. ವೃತ್ತಿಯಿಂದ ಇಂಗ್ಲಿಷ್ ಶಿಕ್ಷಕಿ. ಸದ್ಯ ಅಲ್ಲೇ ವಾಸವಾಗಿದ್ದಾರೆ. ತಾಯ್ನುಡಿಯಾದ ಅರೇಬಿಕ್‌ನಲ್ಲಿ ಬರೆಯುತ್ತಾರೆ. 'Between the sea and the Absence' ಹೆಸರಿನ ಕವನ ಸಂಕಲನ ಪ್ರಕಟವಾಗಿದೆ. ಯುದ್ಧದಲ್ಲಿ ಗಂಡ ಮತ್ತು ಮಕ್ಕಳನ್ನು ಕಳೆದುಕೊಂಡ ಮಹಿಳೆಯರಿಗೆ ಮಾನಸಿಕ ಸ್ಥೈರ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ.



**◆ ನಿಮ್ಮ ಬಾಲ್ಯದ ಪರಿಸರ ಮತ್ತು ವಿದ್ಯಾಭ್ಯಾಸದ ದಿನಗಳನ್ನು ನೆನಪಿಸಿಕೊಳ್ಳಿ...**

ಮೊದಲಿಗೆ ಈ ಅವಕಾಶಕ್ಕಾಗಿ ಧನ್ಯವಾದಗಳು. ಈ ಸಂದರ್ಶನ ಓದುತ್ತಿರುವ ಕನ್ನಡಿಗರಿಗೂ ನನ್ನ ಸಲಾಮ್. ನನ್ನ ಹೆಸರು ಇನಾಮ್. ಸಮುದ್ರ ತೀರದಲ್ಲಿರುವ ಗಾಜಾ ಒಂದು ಸುಂದರ ಕರಾವಳಿ ಪಟ್ಟಣದಲ್ಲಿ ಹುಟ್ಟಿದವಳು. ನಾನು ಹುಟ್ಟಿ ಬೆಳೆದ ಪ್ರದೇಶ ನಗರದ ಗದ್ದಲದಿಂದ ತುಸು ದೂರದಲ್ಲಿ ಇತ್ತು. ಹಚ್ಚಹಸಿರ ಮರಗಳು, ಹಕ್ಕಿಗಳು, ಚಿಟ್ಟೆಗಳ ನಡುವೆ ನಾನು ಬೆಳೆದೆ. ಬಹುಶಃ ಆ ವಾತಾವರಣವೇ ಚಿಕ್ಕ ವಯಸ್ಸಿನಲ್ಲಿ ಬರವಣಿಗೆಯಲ್ಲಿ ತೊಡಗಿಸಿಕೊಳ್ಳಲು ನನ್ನನ್ನ ಪ್ರೇರೇಪಿಸಿರಬಹುದು. ಎಳೆವೆಯಲ್ಲೇ ನಾನು ಸಣ್ಣ ಕಥೆಗಳು, ಕೆಲವು ಕ್ಲಾಸಿಕ್ ಮತ್ತು ಜನಪ್ರಿಯ ಮ್ಯಾಗಜಿನ್‌ಗಳನ್ನು ಓದುತ್ತಿದ್ದೆ. ಓದುವುದು ಅಷ್ಟು ಸುಲಭದ್ದಾಗಿರಲಿಲ್ಲ;